ISSN : 2583-2948

## ಎಲ್ಲಿದೆ ನನ್ನ ಮನೆ?

**ರೇಷ್ಮಾ ಶೆಟ್ಟಿ**

ದುಬಸಿಪಾಳ್ಯ, ಕೆಂಗೇರಿ, ಬೆಂಗಳೂರು

ಬೆಳೆಯುತಾ ಬೆಳೆಯುತಾ

ಇವರೆಲ್ಲಾ ನನ್ನವರು

ಇದೇ ನನ್ನ ಮನೆ ಅಂದುಕೊಂಡೆ

ಬೆಳೆದು ನಿಂತಾಗ

ಅಮ್ಮ ದೂರದಲ್ಲಿ ಕೈ ತೋರಿಸಿ

ಅವರೇ ನಿನ್ನವರು, ಅದೇ ನಿನ್ನ ಮನೆ ಎಂದರು

ಈ ಮನೆಯ ತೊರೆದು

ಆ ಮನೆಗೆ ಹೊರಟೆ

ನನ್ನವರ ತೊರೆದು

ಅವರೇ ನನ್ನವರು ಅಂದುಕೊಂಡೆ

ಬರು ಬರುತಾ ಮನಸ್ತಾಪದಿಂದ

ನನ್ನವರು ಮುನಿದಾಗ

ಹೊರಡು ನೀ ನಿನ್ನ ಮನೆ ಕಡೆ ಎಂದರು

ಹಾಗಿದ್ದರೆ,

ಎಲ್ಲಿದೆ ನನ್ನ ಮನೆ?

ಎಲ್ಲಿ ಇರುವರು ನನ್ನವರು?